ರಾಜನಾದ ಅಶ್ವಪತಿಯ ನೆನಪಾಗುತ್ತದೆ.

ಅಶ್ವಪತಿ ರಾಜನಿಗೆ ಪ್ರಾಣಿಪಕ್ಷಿಗಳ ಭಾಷೆಯ ಅರಿವಿದ್ದಿದ್ದೇ, ಅವನ ಸುಖೀ ದಾಂಪತ್ಯಕ್ಕೆ ಮುಳುವಾಗುತ್ತದೆ. ಅಂದು ಪತ್ನಿಯೊಡನೆ ಮಲಗಿದ್ದ ರಾಜನಿಗೆ ಪಕ್ಷಿಗಳು ಮಾತನಾಡಿಕೊಂಡಿದ್ದು ನೆನಪಾಗಿ ನಗು ಬರುತ್ತದೆ. ಮಡದಿ ನಗುವಿಗೆ ಕಾರಣವನ್ನು ಕೇಳುತ್ತಾಳೆ. ಅದನ್ನು ಹೇಳಿದರೆ ತನ್ನ ಪ್ರಾಣಕ್ಕೇ ಅಪಾಯ ಎಂದು ರಾಜ ತಿಳಿಸಿದರೂ ಕುತೂಹಲ ತಡೆಯಲಾಗದ ಪತ್ನಿ ಹಠದಿಂದಲೇ ನಗುವಿಗೆ ಕಾರಣ ಹೇಳಲೇಬೇಕೆಂದು ಪತಿಯನ್ನು ಒತ್ತಾಯಿಸುತ್ತಾಳೆ. ಪತ್ನಿಯ ಬಗ್ಗೆ ಜಿಗುಪ್ಸೆಗೊಂಡ ರಾಜ, ರಾಣಿಯನ್ನು ಪರಿತ್ಯಜಿಸಿ ಕಾಡಿಗೆ ಅಟ್ಟುತ್ತಾನೆ. ಇನ್ನು ನಮಗೆ ಪ್ರಾಣಿ ಪಕ್ಷಿಗಳ ಭಾಷೆ ತಿಳಿದುಬಿಟ್ಟಿದ್ದರೆ ಪಾಪದ ಪ್ರಾಣಿ ಪಕ್ಷಿಗಳಿಗೆ ಏನೇನು ಕುತ್ತು ಬರುತ್ತಿತ್ತೊ.

ಈ ಮರದಲ್ಲಿ ಅಳಿಲುಗಳ ಆಟ ನೋಡುವುದೇ ಒಂದು ಚಂದ. ಮರದ ಮೇಲಿನಿಂದ ಕೆಳಕ್ಕೆ ಅದೆಷ್ಟು ಬೇಗ ಹಾರಿಬಿಡುತ್ತದೆ! 'ಅಯ್ಯೋ ಪಾಪ... ಏನಾಗಿ ಹೋಯಿತೊ...' ಎಂದು ನಾವು ಭಯದಿಂದ ನೋಡುತ್ತಿರುವಾಗಲೇ ಮತ್ತೆ ಮರದ ಮೇಲೇರಿ ಬಿಟ್ಟಿರುತ್ತದೆ ಅಳಿಲು. ಹಾಗಾದರೆ ಅದರ ಆ ಪುಟ್ಟ ದೇಹದ ರಚನೆ ಹೇಗಿದ್ದೀತು... ಮೂಳೆ ಮುರಿತವೋ, ಕೀಲು ನೋವೋ ಉಂಟಾಗದೆ... ಮರದಲ್ಲಿರುವ ಅಳಿಲುಗಳು ಜೋರಾಗಿ ಕೂಗತೊಡಗಿದರೆ ಅವುಗಳಿಗೇನೋ ತೊಂದರೆ ಬಂದಿರಬಹುದೆಂಬ ಶಂಕೆ ನಮಗೆ. ಪುಟ್ಟ ಪುಟ್ಟ ಹಕ್ಕಿಗಳು, ಅಪರೂಪವಾಗಿ ಗುಬ್ಬಿಗಳು, ಗಿಳಿಗಳು ಮರದ ಮೇಲೆ ಕುಳಿತುಕೊಳ್ಳುವುದುಂಟು.

ವರುಷದ ಋತುಗಳ ಬದಲಾವಣೆಗೆ ತಕ್ಕಂತೆ ಹೊಂಗೆ ಮರವೂ ವಿವಿಧ ರೂಪಾಂತರವನ್ನು ಹೊಂದುತ್ತಾ, ಯಾವುದಕ್ಕೂ ಧೃತಿಗೆಡದೆ ಅಚಲವಾಗಿ ನಿಂತಿರುತ್ತದೆ. ಚಳಿಗಾಲದಲ್ಲಿ ಎಲೆಗಳು ಉದುರಲು ಆರಂಭವಾಗುತ್ತವೆ. ಒಂದೊಂದು ಕೊಂಬೆಯಲ್ಲೂ ಅದೆಷ್ಟು ಎಲೆಗಳು... ತನ್ನ ಎಲೆಗಳೆಲ್ಲಾ ಹಳದಿ ವರ್ಣಕ್ಕೆ ತಿರುಗಿ ಭೂತಾಯಿಯ ಮಡಿಲನ್ನು ಸೇರಿಕೊಳ್ಳುವುದನ್ನು ಅದೆಷ್ಟು ನಿರ್ಮಲ ಭಾವದಿಂದ ನೋಡುತ್ತದೆ ಮರ.

ಆ ನಡುಗುವ ಚಳಿಯಲ್ಲಿ ಬೆತ್ತಲಾದರೂ ಸಹಿಸಿಕೊಂಡು ಗಟ್ಟಿಯಾಗಿ ನಿಂತಿರುವ ರೀತಿ, ಮನುಷ್ಯರಿಗೂ ಪಾಠ ಹೇಳುವಂತಿದೆ. ಅಷ್ಟು ಸುಂದರವಾಗಿ ಚಿಗುರಿದ್ದ ಆ ಎಲೆಗಳಿಗೆ ಕೆಲವೇ ತಿಂಗಳುಗಳಷ್ಟೇ ಆಯಸ್ಸು ಏಕೆ? ಆ ಉದುರುವ ಎಲೆಗಳೇ ಮರದ ಕಣ್ಣೀರಾಗಿರಬಹುದೆ? ಮರದ ಸ್ಥಿತಿಯನ್ನು ಕಂಡಾಗ ಶಿಶಿರನ ಬಗ್ಗೆ ಕೋಪ ಉಕ್ಕುಕ್ಕಿ ಬರುತ್ತದೆ. ಹೊರಗಿನ ಗದಗುಟ್ಟುವ ಥಂಡಿಯ ವಾತಾವರಣದಲ್ಲಿ ಎಲ್ಲರೂ ಆದಷ್ಟೂ ಬೆಚ್ಚನೆಯ ಬಟ್ಟೆಗಾಗಿ ಹಾತೊರೆಯುವಾಗ, ಪಾಪದ ಅಸಹಾಯಕ ತರುವಿನ ಮೇಲೆ ದೌರ್ಜನ್ಯ ನಡೆಸಿ ಪೂರಾ ಬೆತ್ತಲೆಗೊಳಿಸುವುದು ಶಿಶಿರನ ಅಪರಾಧವಲ್ಲವೆ?

ಇಂತಹ ಪರಿಸ್ಥಿತಿಯಲ್ಲಿ ಅಳಿಲುಗಳು, ಹಕ್ಕಿಗಳು ಮರದ ಸ್ಥಿತಿಯನ್ನು ದೂರದಿಂದಲೇ ನೋಡಿ ಬೇರೆಡೆಗೆ ಹಾರಿ ಬಿಡುತ್ತವೆ. 'ಇರುವಾಗ ಎಲ್ಲಾ ನೆಂಟರು, ಬರಿದಾದಾಗ ಯಾರೂ ಇಲ್ಲ' ಎಂಬಂತಾಗುತ್ತದೆ ಮರದ ಸ್ಥಿತಿ. ಆದರೆ ಆಸರೆಯಿಲ್ಲದ ಮರದಲ್ಲಿ ಹಕ್ಕಿಪಕ್ಷಿಗಳಾದರೂ ಏನು ಮಾಡಿಯಾವು. ಆದರೆ ಅಚ್ಚರಿಯೆಂದರೆ ಕೇವಲ ಕೆಲವೇ ದಿನಗಳಷ್ಟೇ ಮರಕ್ಕೆ ಈ ಒಂಟಿತನದ ಶಿಕ್ಷೆ. ಅಥವಾ ಸ್ಥಿತಪ್ರಜ್ಞೆಯನ್ನು ಮೆರೆಯುವ ಮರ ಹಾಗೆ ಭಾವಿಸುವುದಿಲ್ಲವೇನೊ.

.. ಒಣಗಿದ ಎಲೆಗಳು ಉದುರುತ್ತಿದ್ದಂತೆಯೇ, ಒಣಗಿದಂತಿರುವ ಆ ಮರದ ಕಣ ಕಣದಲ್ಲೂ ಹೇಗೆ ಜೀವರಸ ಉತ್ಪತ್ತಿಯಾಗುತ್ತದೊ... ಬರಲಿರುವ ವಸಂತನ ಚಮತ್ಕಾರವೋ ಎಂಬಂತೆ ಹಸಿಹಸಿರು ಚಿಗುರೆಲೆಗಳು ಪ್ರತ್ಯಕ್ಷವಾಗಿ ಬಿಡುತ್ತವೆ. ಮುಟ್ಟಿದರೆ ಬಾಡುವಂತಹ ಕೋಮಲತೆ. ಆ ಹೊಂದಳಿರಿನ ಅಂದವೇ ಅಂದ. ತೆಳುಕಡ್ಡಿಗಳಲ್ಲಿರುವ ಹಸಿರೆಲೆಗಳು ಬಿಳಿಲುಗಳಂತೆ ಉಯ್ಯಾಲೆಗಳಾಗಿ ಗಾಳಿಯಲ್ಲಿ ಅತ್ತಿಂದಿತ್ತ ತೊನೆದಾಡುವ ವೈಖರಿಯೋ... ಬೀದಿಯಲ್ಲಿ ಓಡಾಡುವ ಕೆಲವರಿಗೆ ಅದೇನು ಕೈತುರಿಕೆಯೋ... ಚಂದದ ಮರದ ಬಳುಕು ರೆಂಬೆಗಳ ಎಲೆಗಳನ್ನೆಳೆದೆಳೆದು ಒಂದಷ್ಟನ್ನು ತರಿಯುತ್ತಾ ಸಾಗುವಾಗ, ಬರುವ ಸಿಟ್ಟನ್ನು ನಾವು ಅವಡುಗಚ್ಚಿ ನುಂಗಬೇಕಾಗುತ್ತದೆ.

ಸರಿ... ಈಗ ನಸುಕಿನಲ್ಲೇ ಚಿಲಿಪಿಲಿ ಆರಂಭ. ಇಷ್ಟು ದಿನ ವಲಸೆ ಹೋಗಿದ್ದ ಹಕ್ಕಿಗಳೂ, ಅಳಿಲುಗಳೂ ಎಲ್ಲವೂ ಈಗ ಹಾಜರ್. ವರುಷದ ಆದಿಗೆ ಶುಭ ಕೋರುವಂತೆ, ಸೌರಭ ಸೂಸುವ ಪುಷ್ಪತೇರು ನಮ್ಮ ಹೊಂಗೆಯ ರೆಂಬೆ ಕೊಂಬೆಗಳಲ್ಲಿ....ಅದೇನು ಹೂಗಳ ಭರಾಟೆ...ಲೆಕ್ಕವಿಡಲು ಸಾಧ್ಯವಿಲ್ಲದಂತೆ ಒಂದಕ್ಕೊಂದು ಒತ್ತಾಗಿ ಜೋಡಿಸಿದಂತೆ ಗೊಂಚಲು,ಗೊಂಚಲು ಹೂಗಳು...ಅಷ್ಟೇ ಏಕೆ...ನವಿರಾದ ಪರಿಮಳದೊಂದಿಗೆ ಸುರಿಯುವ ಹೂಮಳೆ... ಯುಗಾದಿಗೆ ಬಾಗಿಲಿಗೆ ಮಾವಿನ ಹಸಿರು ತೋರಣವಾದರೆ, ಹೊರಗೆ ಹೊಂಗೆಯ ಹೂಗೊಂಚಲುಗಳ ಅಲಂಕಾರ.. ಅಂಗಳದಲ್ಲಿ ಬಿಡಿಸಿದ ದೊಡ್ಡ ರಂಗವಲ್ಲಿಗೆ ಅಲ್ಲಲ್ಲಿ ಹೂವಿನ ಕುಸುರಿಯ ಸಿಂಗಾರ. ಮಕರಂದಕ್ಕಾಗಿ ದುಂಬಿಗಳು ಝೇಂಕಾರದೊಂದಿಗೆ ಧಾವಿಸಿ ಬಿಡುತ್ತವೆ. ಈ ಸಮಯದಲ್ಲಿ ತುಸು ಜಾಗ್ರತೆಯಿಂದಿರಬೇಕು ನಾವು.

ಮಲೆನಾಡಿನ ರಂಜ, ಸುರಗಿ ಹೂಗಳಷ್ಟೇ ಸೊಗಸಾಗಿದ್ದರೂ ಅತಿ ಮೃದು.. ಇದೀಗ ಕೆಳಗೆ ಬಿದ್ದಿರುವ ಹೂಗಳನ್ನು ಬಾಚಿ ಹಾಕಿದರೆ ಗಿಡಗಳಿಗೆ ಒಳ್ಳೆಯ ಗೊಬ್ಬರ. ಅಷ್ಟರಲ್ಲೇ ಹೂವಿನಿಂದ ಪುಟ್ಟಪುಟ್ಟ ಕಾಯಿಗಳು ಹಣಕಿ ಹಾಕತೊಡಗುತ್ತವೆ. ಕಾಯಿಗಳು ತುಸು ಬಲಿಯುತ್ತಿದ್ದಂತೆ ಮನೆಯ ಮುಂದೆಲ್ಲಾ ಸಿಪ್ಪೆಗಳ ರಾಶಿ. ಚತುರ ಅಳಿಲುಗಳು ಸಿಪ್ಪೆ ಬಿಡಿಸಿ ಒಳಗಿನ ಕಾಳುಗಳ ತಿಂದು ಕೆಳಗೆ ಹಾಕಿಬಿಡುತ್ತವೆ. ಸರಸರನೆ ಅವರೆ ಕಾಯಿ ಬಿಡಿಸುವುದಕ್ಕೆ ಅಳಿಲುಗಳ ಹತ್ತಿರ ತರಬೇತಿ ತೆಗೆದುಕೊಳ್ಳುವುದು ಸೂಕ್ತವೇನೊ. ಇಷ್ಟೊಂದು ಕಾಳನ್ನು ಇವು ತಿಂದು ಹಾಕಿದರೂ ಮತ್ತೆಷ್ಟೋ ಕಾಯಿಗಳು ಮಾಗಿ ಬೀಜಗಳಾಗುತ್ತವೆ ಎಂಬುದೇ ಅಚ್ಚರಿ. ಹೀಗೆ ಮನೆ ಹೊರಗಿರುವ ಮರ ಪುಟ್ಟ ಮಕ್ಕಳ ಚೇಷ್ಟೆಯನ್ನು ನೆನಪು ಮಾಡಿ ಕೊಡುತ್ತವೆ. ದಿನಕ್ಕೆರಡು ಬಾರಿ ಗುಡಿಸಿದರೂ ಎಲೆಯೋ, ಚಿಗುರೋ, ಕಾಯಿಯೋ ಕೊನೆಗೆ ಹೊಂಗೆಯ ಬೀಜವೋ ಬೀಳುತ್ತಲೇ ಇರುತ್ತವೆ. ತನ್ನ ಪಾಡಿಗೆ ಹೀಗೆ ತೂಗುತ್ತಾ, ತೊನೆಯುತ್ತಾ ನಿಂತ ಮರಕ್ಕೆ ಆಗಾಗ ಖಡ್ಗ ಪ್ರಯೋಗ ಆಗುವುದಂತೂ ತಪ್ಪುವುದಿಲ್ಲ. ಟೆಲಿಫೋನಿನವರು, ವಿದ್ಯುತ್ತಿನವರು ಹಾಕಿರುವ ತಂತಿಗಳನ್ನು ಮುಟ್ಟುವ ಸಾಹಸ ಮಾಡಿದ್ದರ ಪರಿಣಾಮ ಅತಿಘೋರವಾಗಿ ಅಂಗಚ್ಛೇದವಾಗಿಯೇ ಬಿಡುತ್ತದೆ. ಜೀವವಿರುವ ಮರ ಅದೆಷ್ಟು ನೋವು ಅನುಭವಿಸುತ್ತದೊ.. ನಮಗೆ ಬೇಕಾದಾಗ, ಬೇಕಾದಷ್ಟು, ಬೇಕಾದಂತೆ ಮಾತ್ರವೇ ಮರ ಬೆಳೆಯಬೇಕು. ನಮ್ಮ ಇಚ್ಛೆಯನ್ನು ಅತಿಕ್ರಮಿಸುವಂತಿಲ್ಲ.

'ಹೊಂಗೆ ನೆರಳು ತವರಿನ ಆಸರೆಗೆ ಸಮ' ಎಂಬ ಕವಿಗಳ ವರ್ಣನೆಯನ್ನು ಕೇಳಿಯೇ ಇದ್ದೇವೆ. ಹೊಂಗೆ ಎಣ್ಣೆಯನ್ನು ಹಿಂದೆ ದೀಪಕ್ಕೆ ಉಪಯೋಗಿಸುತ್ತಿದ್ದುದನ್ನು ಕೇಳಿದ್ದೇವೆ. ಇದು ನಂಜು ನಿರೋಧಕವೂ ಹೌದು. ಬಣ್ಣದ ತಯಾರಿಕೆಗೆ, ಹಾಗೂ ಕೆಲವೆಡೆ ವಾಹನಗಳಿಗೆ ಇಂಧನವಾಗಿ ಹೊಂಗೆ ಎಣ್ಣೆಯನ್ನು ಬಳಸಲಾಗುತ್ತಿದೆ.

ವರುಷದುದ್ದಕ್ಕೂ ಇಷ್ಟೊಂದು ಕಸ ಬೀಳಿಸುವ ಮರ ನಿಮಗೇಕೆ ಬೇಕು ಎಂದು ಮೂಗು ಮುರಿಯುವವರಿದ್ದಾರೆ. ಮರದ ದೊಡ್ಡ ಬೇರಿನಿಂದ ಕಾಂಪೌಂಡ್ ಬಿರಿ ಬಿಟ್ಟಾಗ, 'ಈ ಮರಗಳಿದ್ದರೆ ಹೀಗೇ ತೊಂದರೆ' ಎಂದು ಒಂದು ತೆರನಾಗಿ ನೋಡುತ್ತಾ ನಮ್ಮದು ಅವಿವೇಕವೆಂಬಂತೆ ಪ್ರತಿಕ್ರಿಯಿಸುವವರಿದ್ದಾರೆ. ಮನೆಯ ಮುಂದೆ ಕಾರು ನಿಲ್ಲಿಸಲು ಎಷ್ಟು ಕಷ್ಟ ನೋಡಿ ಎಂದು ಬೋಧಿಸುವವರಿದ್ದಾರೆ. ಮನೆಯಲ್ಲಿ ತಾವು ದೇವರಿಗೆ ಹಾಕಿದ ಹೂವಿನ ಹಾರ ಹಳೆತಾದಾಗ ಅದನ್ನು ಈ ಮರಕ್ಕೆ ತೊಡಿಸುವವರಿದ್ದಾರೆ. ಯಾವ ಮಾಯದಲ್ಲಿಯೋ ಕಸಮುಸುರೆಯ ಕವರುಗಳನ್ನು ಮರದ ಬುಡದಲ್ಲಿ ತಂದಿಟ್ಟು ಅದೃಷ್ಯರಾಗಿ ಬಿಡುವ ಜಾಣರಿದ್ದಾರೆ. ತಮಗೆ ಬೇಡದ ಫೋಟೋಗಳನ್ನು ಮರದ ಬುಡದಲ್ಲಿಟ್ಟು ನಿರಾಳರಾಗುವ ಕಿಲಾಡಿಗಳಿದ್ದಾರೆ. ಮರದ ಕೆಳಕೊಂಬೆಗಳಲ್ಲಿ ತಮಗೆ ಬೇಡದ್ದೆಲ್ಲವನ್ನೂ ನೇತುಹಾಕಿ ವಿರೂಪಗೊಳಿಸುವ ವಿಕೃತ ಮನಸ್ಸಿನವರಿದ್ದಾರೆ.

ಯಾವುದನ್ನೂ ಪ್ರತಿಭಟಿಸಲಾಗದೆ ದಿವ್ಯ ಮೌನ ವಹಿಸುತ್ತಾ, ಋತುಮಾನಕ್ಕೆ ತಕ್ಕಂತೆ ದಿರಿಸು ಧರಿಸಿ , ಮಾನವ ದೌರ್ಜನ್ಯವನ್ನು ಸಹಿಸಿಯೂ ಉಸಿರು ಉಸಿರನ್ನು ಅವರಿಗಾಗಿ ಧಾರೆಯೆರೆಯುತ್ತಾ, ಪರಿಸರ ಮಾಲಿನ್ಯವನ್ನು ತಡೆಯುತ್ತಾ ನಿಂತಿರುವ ಅಂಗಳದ ಹೊಂಗೆಯ ಸಂಗ ನಮಗೆಂದಿಗೂ ತಪ್ಪದಿರಲಿ.

*ನುಂಗಿಯೂ ಬೇಗುದಿಯ ನಗುನಗುವಾ ಹೊಂಗೆಯು*
*ಭಂಗವಾದರೂ ಅಂಗ, ಅಂಜದಾ ನಿಲುವು*
*ಸಿಂಗಾರ ಹಸಿರಿಂದ ಜೊಂಪೆಗಳು ಹೂವು*
*ಬಂಗಾರ ನಿನ್ನಿರವು ಮನುಜರಿಗೆ ಹಿತವು*